International Journal of Kannada Research
www.kannadajournal.com

ISSN: 2454–5813
IJKR 2018; 4(1): 84-85
© 2018 IJKR
www.kannadajournal.com
Received: 17-11-2017
Accepted: 18-12-2017

**ಡಾ.ಶಿವಸೋಮಪ್ಪ ನಿಟ್ಟೂರು**
ಬೋಧನ ಸಹಾಯಕರು
ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೫೮೦೦೦೩

**Correspondence**
**ಡಾ.ಶಿವಸೋಮಪ್ಪ ನಿಟ್ಟೂರು**
ಬೋಧನ ಸಹಾಯಕರು
ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೫೮೦೦೦೩

# ಕೆರೆಗೆ ಹಾರ ಮನೋವೈಜ್ಞಾನಿಕ ವಿಶ್ಲೇಷಣೆ

**ಡಾ.ಶಿವಸೋಮಪ್ಪ ನಿಟ್ಟೂರು**

ಕರ್ನಾಟಕದ ಜನಪದ ಸಾಹಿತ್ಯದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಜನಪದ ಕಥನಗೀತೆಗಳಲ್ಲಿ ಇದೂ ಒಂದು. ಇದನ್ನು ಬಿಎಂ.ಶ್ರೀ ಅವರು 'ಕನ್ನಡ ಬಾವುಟ' ಎಂಬ ಗ್ರಂಥದಲ್ಲಿ ಸೇರಿಸಿ ಮುದ್ರಿಸಿದರು. ತದನಂತರ ಇಂಥಹ ಅನೇಕ ಕಥನಗೀತೆಗಳು ಪ್ರಾದೇಶಿಕವಾಗಿಯೂ ಹರಡಿಕೊಂಡಿರುವುದನ್ನು ಗುರುತಿಸಿದ ವಿದ್ವಾಂಸರು ಅವುಗಳನ್ನು ಸಂಗ್ರಹಿಸುವ ಮೂಲಕ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಈ ನಿಟ್ಟಿನಲ್ಲಿ ಜನಪದ ಕಥನಗಿತೆಗಳನ್ನು ಸಂಗ್ರಹಿಸಿದವರೆಂದರೆ, ಬಿಎಂಶ್ರೀ, ಕ.ರಾ.ಕೃ, ಎಲ್.ಆರ್.ಹೆಗಡೆ, ಜೀಶಂಪ ಮೊದಲಾದವರು ಪ್ರಮುಖರು. ಇವರು ಸಂಗ್ರಹಿಸಿದ ಗೀತೆಗಳಲ್ಲಿ ಪ್ರಾದೇಶಿಕವಾಗಿ ಭಿನ್ನತೆಗಳಿರುವುದನ್ನು ಗುರುತಿಸಬಹುದು. ಆದರೆ ಇಲ್ಲಿ ಬಿಎಂಶ್ರೀ ಅವರು ಸಂಗ್ರಹಿಸಿದ 'ಕೆರೆಗೆ ಹಾರ' ಎಂಬ ಕಥನಗೀತೆಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

'ಕೆರೆಗೆ ಹಾರ' ಎಂಬ ಕಥನ ಗೀತೆಯು 'ಭಾಗೀರಥಿ' ಎಂಬ ಹೆಣ್ಣುಮಗಳೊಬ್ಬಳು ಕೆರೆಗೆ ಹಾರವಾದ ಹೃದಯ ವಿದ್ರಾವಕವಾದ ಕಥೆಯುಳ್ಳ ಕಥನಗೀತೆಯಾಗಿದೆ. ಇದರ ಪೂರ್ಣ ಕಥೆ ಹೀಗಿದೆ; ಕಲ್ಲನಕೇರಿ ಮಲ್ಲನಗೌಡ ಎಂಬವನು ತನ್ನ ಗ್ರಾಮದಲ್ಲಿ ನೀರಿಗಾಗಿ ಕೆರೆಯೊಂದನ್ನು ಕಟ್ಟಿಸುತ್ತಾನೆ. ಆದರೆ ನತಧೃಷ್ಟವಶಾತ್ ಆ ಕರೆಗೆ ಒಂದು ಸೆರೆಯು ನೀರು ಬರುವುದಿಲ್ಲ. ಇದರಿಂದ ಗಾಬರಿಗೊಂಡ ಮಲ್ಲನಗೌಡನು ಜ್ಯೋತಿಷಿಗಳ ಬಳಿ ಹೋಗಿ, ಹೊತ್ತಿಗೆಯನ್ನು ತೆಗೆಯಿಸಿ ನೀರು ಬರದಿರುವುದಕ್ಕೆ ಕಾರಣವನ್ನು ಕೇಳುತ್ತಾನೆ. ಆಗ ಜ್ಯೋತಿಷಿಯು ಹೊತ್ತಿಗೆಯನ್ನು ಓದಿ "ದೇವರಿಲ್ಲ ದಿಂಡ್ರಿಲ್ಲ ದೆವ್ವಲ್ಲ ಭೂತಲ್ಲ ಹಿರಿಸೊಸಿ ಮಲ್ಲವ್ವನ ಹಾರವ ಕೊಡಬೇಕು" ಎಂದು ಹೇಳುತ್ತಾನೆ. ಆದರೆ ಗೌಡನು ಇದಕ್ಕೆ ಒಪ್ಪುವುದಿಲ್ಲ. ಹಿರಿಯಸೊಸೆಯನ್ನು ಕೊಟ್ಟರೆ ಹಿರಿತನಕೆ ಯಾರಿಲ್ಲ. ಆದ್ದರಿಂದ ಕಿರಿಯ ಸೊಸೆಯನ್ನು ಕೊಡುವುದಾಗಿ ಮನೆಯಲ್ಲಿ ಮಾತನಾಡುತ್ತಾರೆ. ಇದನ್ನು ಕೇಳಿಸಿಕೊಂಡ ಭಾಗೀರಥಿಗೆ ನೋವಾಗುತ್ತದೆ. ಅಲ್ಲದೇ ತಾನು ತನ್ನ ತವರುಮನೆಗೆ ಹೋಗಿ ಬರುವುದಾಗಿ ಅತ್ತಗೆ ಹೇಳಿ ಹೊರಡುತ್ತಾಳೆ. ಆಗ ತವರು ಮನೆಗೆ ಹೋದಾಗ ಮನೆಯ ಮುಂದೆ ತಂದೆಯ ಭೇಟಿಯಾಗುತ್ತದೆ. ಎಂದೂ ಬರದ ಮಗಳು ಇಂದು ಯಾಕೆ ಬಂದಳು ಎಂದು ಯೋಚಿಸುತ್ತ ಬಳಿಗೆ ಬಂದಾಗ ಅವಳ ಬಾಡಿದ ಮುಖವನ್ನು ನೋಡಿ ಏನಾಯಿತೆಂದು ಕೇಳುತ್ತಾನೆ. ಆಗ ಮಗಳು ಅತ್ತಿ ಮಾವಂದಿರು ಮನೆಯಿಂದ ಹೊರಗೆ ಹಾಕುತ್ತಾರಂತೆ ಎಂದು ಸುಳ್ಳು ಹೇಳುತ್ತಾಳೆ. ಅದಕ್ಕೆ ತಂದೆಯಿಂದ ಬಂದ ಉತ್ತರ ಹಾಕಿದರೆ ಹಾಕಲಿ ಬಿಡು ಹೊಲಮನಿ ಕೊಡುತ್ತೇನೆ ಎನ್ನುತ್ತಾನೆ. ಇದೇ ರೀತಿ ತಾಯಿ, ಅಕ್ಕನಿಗೆ ಈ ವಿಷಯ ತಿಳಿಸಿದಾಗಲೂ ಜೋಡುವಾಲಿ(ಕಿವಿಯೋಲೆ) ಕೊಡುವುದಾಗಿ ತಾಯಿ ಹೇಳಿದರೆ, ತನ್ನ ಮಕ್ಕಳನ್ನು ಜೊತೆಗೆ ಕಳುಹಿಸುವುದಾಗಿ ಅಕ್ಕ ಹೇಳುತ್ತಾಳೆ. ಇವರ್‍ಯಾರ ಮಾತುಗಳು ಅವಳಿಗೆ ಸಮಾಧಾನ ತರದಿದ್ದಾಗ ತನ್ನ ಸ್ನೇಹಿತೆಯ ಮನೆಗೆ ಹೋಗಿ ಅವಳಲ್ಲಿ ತನ್ನನ್ನು ಅತ್ತೆ ಮಾವರು ಸೇರಿ ಕೆರೆಗೆ ಹಾರ ನೀಡುವ ನಿಜ ಸ್ಥಿತಿಯನ್ನು ತಿಳಿಸುತ್ತಾಳೆ. ಇದಕ್ಕೆ ಗೆಳತಿಯು 'ಕೊಟ್ಟಾರ ಕೋಡಲೇಳು ಇಟ್ಟಂಗ ಇರಬೇಕು' ಎಂದು ಹೇಳುತ್ತಾಳೆ. ಕೊನೆಗೆ ಅತ್ತಿಯ ಮನೆಗೆ ಬಂದು ಕಂಬನಿ ಸುರಿಸುತ್ತಾಳೆ. ಆದರೆ ಅವಳ ಮನದಾಳದ ನೊವನ್ನು ಯಾರು ಅರ್ಥಮಾಡಿಕೊಳ್ಳುವುದಿಲ್ಲ. ಕೊನೆಗೆ ಗಂಗೀ ಪೂಜೆಯ ನೆಪದಲ್ಲಿ ಕೆರೆಗೆ ಕರೆದುಕೊಂಡು ಹೋಗಿ ಪೂಜೆ ಸಲ್ಲಿಸಿ, ಊಟ ಮಾಡಿ, ಬಂಗಾರದ ಬಟ್ಟಲನ್ನು ಅಲ್ಲಿಯೇ ಬಿಟ್ಟು ಬರುತ್ತಾರೆ. ಅದನ್ನು ತರುವ ನೆಪ ಮಾಡಿ ಗಂಗವ್ವ, ಗೌರವ್ವ, ನಿಂಗವ್ವ, ನೀಲವ್ವರಿಗೆ ಹೇಳುತ್ತಾರೆ. ಆದರೆ ಅವರ್‍ಯಾರು ಹೋಗದಿದ್ದಾಗ ಭಾಗೀರಥಿ ತಾನೇ ತರಲು ಹೋಗುತ್ತಾಳೆ. ಆಗ ಬಟ್ಟಲು ತೆಗೆದುಕೊಂಡು ಬರುವಾಗಿ ಗಂಗಾಮಾತೆಯು ಉಕ್ಕಿ ಅವಳನ್ನು ಕೆರೆಗೆ ಹಾರವಾಗುತ್ತಾಳೆ. ಇದನ್ನು ತಿಳಿದ ಗಂಡ ಮಾದೇರಾಯನು ಕೆರೆಗೆ ಹಾರಿ ಪ್ರಾಣಬೀಡುತ್ತಾನೆ ಎಂಬುದು ಈ ಕಥನಗೀತೆಯ ಸಂಕ್ಷಿಪ್ತ ಕಥೆ.

ಈ ಕಥನಗೀತೆ ಮೇಲ್ನೋಟಕ್ಕೆ ತ್ಯಾಗದ ಪ್ರತಿಕವೆಂಬಂತೆ ಇದುವರೆಗೂ ಈ ಕಾವ್ಯವನ್ನು ಬಿಂಬಿಸಲಾಗಿದೆ. ಅಲ್ಲದೆ ಹೆಣ್ಣಿನ ಹೃದಯವಿದ್ರಾಯಕತೆಯನ್ನು ಎತ್ತಿ ತೋರಿಸಲಾಗಿದೆ. ಆದರೆ ಈ ಕಥನಗೀತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ತ್ಯಾಗದ ಜೊತೆಗೆ ಮಾನವನ ಮೌಢ್ಯಾಚರಣೆಯನ್ನು ಎತ್ತಿ ತೋರುತ್ತದೆ. ತ್ಯಾಗ ಮತ್ತು ಮೌಢ್ಯತೆಯ ಎರಡು ಮುಖಗಳು ಕಾಣುತ್ತವೆ. ಒಂದು ಕಡೆ ಭಾಗೀರಥಿಯ ತ್ಯಾಗವನ್ನು ತಿಳಿಸಿದರೆ, ಮತ್ತೊಂದು ಕಡೆ ಮಲ್ಲನಗೌಡನ ಮೌಢ್ಯತೆಯನ್ನು ತೋರುತ್ತದೆ. ಮಲ್ಲನಗೌಡರು ಜ್ಯೋತಿಷಿಯು ಹೊತ್ತಿಗೆ ತೆಗೆದು ಹೇಳುವುದನ್ನು ನಂಬುತ್ತಾನೆ. ಆದರೆ ಈ ವಿಚಾರ ಗೌಡನಿಗೆ ಮೊದಲೇ ಜ್ಯೊತಿಷಿಗಳನ್ನು ಕೇಳಿದ್ದರೆ ಕೆರೆಯಲ್ಲಿ ನೀರು ಬರದಿರುವ ವಿಚಾರವೂ ಮೊದಲೇ ತಿಳಿಯುತ್ತಿತ್ತು. ಆಗ ಭಾಗೀರಥಿಯೂ ಕೆರೆಗೆ ಹಾರವಾಗುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಅಷ್ಟಕ್ಕೂ ಜ್ಯೋತಿಷಿಯೂ ಭಾಗೀರಥಿಯನ್ನು ಕೆರೆಗೆ ಹಾರವಾಗಿ ನೀಡುವಂತೆ ಹೇಳಿದ ಉಲ್ಲೇಖವೂ ಇಡೀ ಗೀತೆಯಲ್ಲಿ ಕಂಡುಬರುವುದಿಲ್ಲ. ಬದಲಾಗಿ ಹಿರಿಯ ಸೊಸೆ ಮಲ್ಲಮ್ಮನನ್ನು ಬಲಿಕೊಡುವಂತೆ ಹೇಳುತ್ತಾನೆ. ಆದರೆ ಹಿರಿಯ ಸೊಸೆ ಎಂಬ ಕಾರಣಕ್ಕೆ ಅವಳನ್ನು ಬಲಿಕೊಡುವುದನ್ನು ಮಲ್ಲನಗೌಡ ನಿರಾಕರಿಸುತ್ತಾನೆ. ಕಿರಿಯ ಸೊಸೆಯಾದ ಭಾಗೀರಥಿಯನ್ನು ಕೆರೆಗೆ ಹಾರವಾಗಿಸಲು ಮನೆಯವರೆಲ್ಲರೂ ಸೇರಿ ನಿರ್ಧರಿಸುತ್ತಾರೆ. ಆದರೆ ಇದಕ್ಕೆ ಅವಳ ಒಪ್ಪಿಗೆ ಇದೆಯೋ? ಇಲ್ಲವೊ? ಎಂಬುದನ್ನು ಕೇಳುವುದಿಲ್ಲ. ಇದನ್ನು ನೋಡಿದರೆ ಭಾಗೀರಥಿಯ ವಿಚಾರದಲ್ಲಿ ಅತ್ತೆ ಮಾವಂದಿರು ಸೇರಿ ಮಾಡಿದ ಮೋಸವನ್ನು ಗಮನಿಸಬಹುದು. ಹೀಗಾಗಿ ತ್ಯಾಗದ ಜೊತೆಜೊತೆಗೆ ಜನಪದ ಕಥನಗೀತಕಾರನು ಮೌಢ್ಯತೆಯನ್ನು ಜನರಿಗೆ ತಿಳಿಸುವ ಪ್ರಯತ್ನವನ್ನು ಮಾಡುತ್ತಿರಬೇಕು.

ಇತ್ತ ತವರು ಮನೆಗೆ ಬಂದಾಗಲೂ ಸಹಿತ ಮನೆಯವರಿಂದ ಸರಿಯಾದ ಸ್ಪಂದನೆ ದೊರೆಯುವುದಿಲ್ಲ. ಮಗಳು ಬೇರೆಯಾಗುವ ವಿಚಾರವನ್ನೂ ಹೇಳಿದಾಗಲೂ ಅವಳು ಹೇಳುತ್ತಿರುವುದು ಸುಳ್ಳು ಎಂಬ ಸಣ್ಣ ಸುಳಿಹು ಕೂಡ ಅವರಿಗೆ ಸಿಗುವುದಿಲ್ಲ. ಆದರೆ ಸ್ನೇಹಿತೆಯ ಮುಂದು ನಿಜವನ್ನೇ ಹೇಳಿದರೂ ಅವಳು ಸಹಿತ ಪರಂಪರೆಯ ನಾರಿಯಂತೆಯೇ ನಡೆದುಕೊಳ್ಳುತ್ತಾಳೆ. ಇದು ಅವಳಲ್ಲಿ ಜೀವನ ಜಿಗುಪ್ಸೆಯನ್ನು ಹುಟ್ಟಿಸಿದಂತೆ ಭಾಸವಾಗುತ್ತದೆ. ಹೆಣ್ಣಿನ ಕುರಿತಾಗಿ ಸಮಾಜದಲ್ಲಿ ಇರುವ ಸ್ಥಾನ ಒಳ್ಳೆಯದಾಗಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಮನೋವಿಜ್ಞಾನದ ಪ್ರಕಾರ ಖಿನ್ನತೆಗೊಳಗಾದ ಯಾವುದೆ ವ್ಯಕ್ತಿಯಾಗಲಿ ಪ್ರಾಣತ್ಯಾಗಕ್ಕೆ ಸಿದ್ಧನಾಗುತ್ತಾನೆ. ಕೆರೆಗೆ ಹಾರ ಕೊಡುವ ನಿರ್ಧಾರವನ್ನು ಅತ್ತೆ ಮಾವಂದಿರು ಮಾಡಿದಾಗ ಅದನ್ನು ವಿರೋಧಿಸುವ ಮನಸ್ಸಾಗಲಿ, ಪ್ರತಿರೋಧವಾಗಲಿ ಅವಳಲ್ಲಿ ಉಳಿದಿರುವುದಿಲ್ಲ. ಹಾಗೆಯೇ ತನ್ನನ್ನು ರಕ್ಷಿಸಲು ಪತಿಯು ಜೊತೆಯಲ್ಲಿರದೆ ದಂಡಿಗೆ ಹೊಗಿದ್ದು, ಈ ಎಲ್ಲಾ ಯೋಚನೆಗಳಿಂದ ಅವಳಲ್ಲಿ ಖಿನ್ನತೆ ಮೂಡಿರಬೇಕು. ಹಾಗೆ ಖಿನ್ನತೆಗೊಳಗಾದ ಭಾಗೀರಥಿಯು ಸಹಿತ ಅಂತಿಮವಾಗಿ ಪ್ರಾಣತ್ಯಾಗಕ್ಕೆ ಸಿದ್ಧಳಾಗಿರಬಹುದು. ಇದನ್ನೇ ಧರ್ಮಿಷ್ಟರು, ಆಸ್ತಿಕರು ತ್ಯಾಗದ ಪ್ರತೀಕವೆಂಬಂತೆ ಈ ಗೀತೆಯನ್ನು ಗುರುತಿಸಲಾಗುತ್ತಿದೆ. ಆದರೆ ಜನಪದ ಗೀತೆಕಾರನ ಉದ್ದೇಶ ಇದಾಗಿರದೆ ಹೆಣ್ಣಿನ ಭಾವನೆಗಳಿಗೆ ಬೆಲೆ ಕೊಡದ ಸಮಾಜವನ್ನು, ಮೌಢ್ಯತೆಯ ಹೆಸರಿನಲ್ಲಿ ನಡೆದ ಹೆಣ್ಣಿನ ಬಲಿಯನ್ನು ಈ ಗೀತೆಯ ಮೂಲಕ ಪ್ರತಿರೋಧಿಸುತ್ತಿರುವುದನ್ನು ಗುರುತಿಸಬಹುದು.

ಇಷ್ಟೆ ಅಲ್ಲದೆ ಇಲ್ಲಿ ಕೆರೆಗೆ ಹಾರವಾಗುವುದು ಕೇವಲ ಭಾಗೀರಥಿಯಲ್ಲ. ಬದಲಾಗಿ ಆತನ ಪತಿ ಮಾದೇವರಾಯನೂ ಕೂಡ ಹೆಂಡತಿಯ ಮೇಲಿನ ಪ್ರೀತಿಯಿಂದಾಗಿ ಕೆರೆ ಹಾರಿ ಬಲಿಯಾಗುತ್ತಾನೆ. ಇದು ಪತಿಗೆ ಪತ್ನಿಯ ಮೇಲೆ ಇಟ್ಟಿದ್ದ ಆಗಾಧವಾದ ಪ್ರೀತಿಯ ಧ್ಯೋತಕವಾಗಿ ತೊರುತ್ತದೆ. ಈ ಕಥನ ಗೀತೆಯಲ್ಲಿ ಗಂಡನ ರೋಧನವನ್ನು ಗೀತೆರಚನಕಾರನು ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಆತನು ಕೆರೆಯ ಬಳಿಗೆ ಬಂದು ಹೇಳುವುದು ಹೀಗಿದೆ;

> “ಸಾವಿರ ವರಹ ಕೊಟ್ಟರು ಸಿಗಲಾದರದ ಸತಿ ನೀನು  
> ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೊದೆ?  
> ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ  
> ಮುತ್ತಿನೋಲೆ ಇಟ್ಟುಗೊಳ್ಳೋ ಮುತ್ತೈದೆ ಎಲ್ಲಿಗೋದೆ?  
> ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು  
> ಬಿಟ್ಟಾನು ಕಣ್ಣೀರ ಹಾರೀದ ಕೆರೆ ನೀರಾಗ ”

ಎಂಬಲ್ಲಿ ತನ್ನ ಹೆಂಡತಿಯಂತವಳು ಎಲ್ಲಿಯೂ ಸಿಗುವುದಿಲ್ಲ. ಅವಳು ಮುತ್ತೈದೆ ಸಾವನ್ನು ನೆನೆದು ದುಃಖಿಸುವ ರೀತಿ ಎಂತ ಗಂಡೆದೆಯ ಗಂಡುಗಳ ಮನಸ್ಸನ್ನು ಕರಗಿಸುತ್ತದೆ. ಹೆಣ್ಣಿನ ಆಯ್ಕೆಯಲ್ಲಿ ಒಪ್ಪಿಗೆ ಕೇಳುವ ತಂದೆ ತಾಯಿಗಳು, ಅವಳ ಸಾವಿಗೆ ಒಪ್ಪಿಗೆ ಕೇಳುವುದಿಲ್ಲ ಎಂಬ ನೋವು ತುಂಬಿರುವುದು ಚಿಂತಾಜನಕವೆನಿಸುತ್ತದೆ. ಈ ಸಮಾಜದಲ್ಲಿ ಹೆಣ್ಣಿನ ಸ್ಥಾನ ಬಲಿಕೊಡುವ ಕುರಿಯಂತೆ ಎಂಬುದನ್ನು ಈ ಗೀತೆಯ ಮೂಲಕ ತಿಳಿಯಬಹುದು.

ಆದರೆ ಇಲ್ಲಿ ಇನ್ನೊಂದು ವಿಚಾರವನ್ನು ಗಮನಿಸಬಹುದು. ಗಂಗಾಮಾತೆಯು ಒಂದು ಹೆಣ್ಣು. ತನ್ನ ಬರುವಿಕೆಗೆ ಮತ್ತೊಂದು ಹೆಣ್ಣಿನ ಬಲಿಯು ನಡೆಯುವುದನ್ನು ಆಶಿಸುತ್ತಾಳೆಯೇ? ಎಂಬುದು ಪ್ರಶ್ನಾತೀತವಾಗಿಯೇ ಉಳಿಯುತ್ತದೆ. ಗಂಗಾಮಾತೆಯನ್ನು ಪಾಪಗಳನ್ನು ತೊಳೆಯುವ ಪಾವನಗಂಗೆ ಎಂದು ಕರೆಯಲಾಗುತ್ತದೆ. ಆದರೆ ಆ ಗಂಗಾಮಾತೆಯೇ ಹಾರವಾಗಿ ಹೆಣ್ಣನ್ನು ಪಡೆಯುವ ಮೂಲಕ ಪಾಪವೆಸುಗುತ್ತಾಳೆಯೇ? ಎಂಬ ಧ್ವನಿಯೂ ಕೂಡ ಇಲ್ಲಿ ಮುಖ್ಯವೆನಿಸುತ್ತದೆ. ಒಟ್ಟಾರೆಯಾಗಿ ಹೆಣ್ಣನ್ನು ಸಮಾಜ ಕಾಣುವ ಬಗೆಯನ್ನು ಈ ಕಥನಗೀತೆ ತುಂಬಾ ಮಾರ್ಮಿಕವಾಗಿಯೇ ಚಿತ್ರಿಸುತ್ತದೆ.

ಹೀಗೆ ಕೆರೆಗೆ ಹಾರ ಎಂಬ ಕಥನಗೀತೆಯು ಕೇವಲ ತ್ಯಾಗದ ಪ್ರತೀಕವಷ್ಟೇ ಅಲ್ಲದೇ; ಮೌಢ್ಯತೆ ಮತ್ತು ಮೋಸದ ಅನಾವರಣತೆಯನ್ನು ಹೊಂದಿದೆ. ಜನಪದ ಕಥನಗೀತೆಯ ರಚನೆಕಾರನ ಮೂಲ ಉದ್ದೇಶ ತ್ಯಾಗದ ಜೊತೆಗೆ, ಹೆಣ್ಣಿಗಾಗುವ ಮೋಸ ಮತ್ತು ಸತಿಯನ್ನು ಕಳೆದುಕೊಂಡ ಗಂಡನ ಸಾವಿನ ಚಿತ್ರಣವನ್ನು ಚಿತ್ರಿಸಿದ್ದಾನೆ. ಇದೊಂದು ತ್ಯಾಗದ ಗೀತೆಯಾಗಿ ಅಷ್ಟೇ ಉಳಿಯದೇ ಶೋಕದ ಗೀತೆಯಾಗಿ ಮನ ಕಲಕುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ; ಇದೊಂದು ಜ್ಯೋತಿಷ್ಯ, ನಂಬಿಕೆಗಳ ಹೆಸರಿನಲ್ಲಿ ಹೆಣ್ಣನ್ನು ಬಲಿಯನ್ನಾಗಿಸುವ ಹುನ್ನಾರದ ಕಥೆಯಾಗಿ ತೋರುತ್ತದೆ.